# ಪ್ರಾರ್ಥನೆ

ಶ್ರೀಯಾಮುನಾಚಾರ್ಯರಿಂದ ರಚಿತವಾದ ಸ್ತೋತ್ರರತ್ನದಿಂದ

ನಮೋ ನಮೋ ವಾಙ್ಮನಸಾತಿಭೂಮಯೇ
ನಮೋ ನಮೋ ವಾಙ್ಮನಸೈಕ-ಭೂಮಯೇ |
ನಮೋ ನಮೋಽನಂತ-ಮಹಾ-ವಿಭೂತಯೇ
ನಮೋ ನಮೋಽನಂತ-ದಯೈಕ-ಸಿಂಧವೇ ||

ವಾಕ್ಕು ಮತ್ತು ಮನಸ್ಸು ಇವುಗಳನ್ನು ಮೀರಿದ ನಿನಗೆ ನಮಸ್ಕಾರ; ವಾಕ್ಕಿಗೂ ಮತ್ತು ಮನಸ್ಸಿಗೂ ಏಕವಿಷಯನಾದ ನಿನಗೆ ನಮಸ್ಕಾರ; ಅನಂತ ಮಹಾವಿಭೂತಿಯಾದ ನಿನಗೆ ನಮಸ್ಕಾರ ; ಅನಂತ-ದಯಾಸಾಗರನಾದ ನಿನಗೆ ನಮಸ್ಕಾರ.

ನಿಮಜ್ಜತೋಽನಂತ ಭವಾರ್ಣವಾಂತ-
ಶ್ಚಿರಾಯ ಮೇ ಕೂಲಮಿವಾಸಿ ಲಬ್ಧಃ |
ತ್ವಯಾಪಿ ಲಬ್ಧಂ ಭಗವನ್ನಿದಾನೀ-
ಮನುತ್ತಮಂ ಪಾತ್ರಮಿದಂ ದಯಾಯಾಃ ||

ಅನಂತ ಸಂಸಾರಸಾಗರದಲ್ಲಿ ಮುಳುಗುತ್ತಿರುವ ನನಗೆ ಬಹಳ ಕಾಲದ ಮೇಲೆ ನೀನು ದಡದ ಹಾಗೆ ಸಿಕ್ಕಿರುತ್ತೀಯೆ; ಭಗವಂತನೆ, ನಿನ್ನ ದಯೆಗೂ ಕೂಡ ಒಂದು ಅತ್ಯುತ್ತಮವಾದ ಪಾತ್ರವು ದೊರಕಿರುತ್ತದೆ.

ನಿರಾಸಕಸ್ಯಾಪಿ ನ ತಾವದುತ್ಸಹೇ
ಮಹೇಶ ಹಾತುಂ ತವ ಪಾದಪಂಕಜಮ್ |
ರುಷಾ ನಿರಸ್ತೋಽಪಿ ಶಿಶುಸ್ಸ್ತನಂಧಯೋ
ನ ಜಾತು ಮಾತುಶ್ಚರಣೌ ಜಿಹಾಸತಿ ||

ಮಹೇಶ, ನೀನು ನನ್ನನ್ನು ತಿರಸ್ಕರಿಸಿದರೂ ನಿನ್ನ ಪಾದಪಂಕಜವನ್ನು ನಾನು ಬಿಡಲಾರೆ; ಹಾಲುಹಸುಳೆಯು ರೋಷದಿಂದ ತಳ್ಳಲ್ಪಟ್ಟರೂ ತಾಯಿಯ ಕಾಲನ್ನು ಎಂದಿಗೂ ಬಿಡದು.

ನ ಮೃಷಾ ಪರಮಾರ್ಥಮೇವ ಮೇ
ಶೃಣು ವಿಜ್ಞಾಪನಮೇಕಮಗ್ರತಃ |
ಯದಿ ಮೇ ನ ದಯಿಷ್ಯಸೇ ತತೋ
ದಯನೀಯಸ್ತವನಾಥ ದುರ್ಲಭಃ ||

ನಾಥ, ನನ್ನ ಒಂದು ಬಿನ್ನಹವನ್ನು ಕೇಳು; ಅದು ಸಟೆಯಲ್ಲ, ಸತ್ಯವಾದದ್ದು; ನೀನು ನನ್ನಲ್ಲಿ ದಯೆಯನ್ನು ತೋರಿಸದಿದ್ದರೆ, ನಿನ್ನ ದಯೆಗೆ ಸರಿಯಾದ ಪಾತ್ರವು ದೊರಕುವುದೇ ದುರ್ಲಭ ವಾಗುತ್ತದೆ.

ತದಹಂ ತ್ವದೃತೇ ನ ನಾಥವಾನ್
ಮದೃತೇ ತ್ವಂ ದಯನೀಯವಾನ್ನ ಚ |
ವಿಧಿನಿರ್ಮಿತಮೇತಮನ್ವಯಂ
ಭಗವನ್ ಪಾಲಯ ಮಾಸ್ಮ ಜೀಹಪಃ ||

ಆದುದರಿಂದ ನಿನ್ನನ್ನು ಬಿಟ್ಟರೆ ನನಗೆ ಒಡೆಯನಿಲ್ಲ, ನನ್ನನ್ನು ಬಿಟ್ಟರೆ ನಿನ್ನ ದಯೆಗೆ ಸರಿಯಾದ ಪಾತ್ರನಿಲ್ಲ; ಭಗವಂತನೆ, ವಿಧಿಯಿಂದ ನಿರ್ಮಿತವಾದ ನಮ್ಮ ಸಂಬಂಧವನ್ನು ಪಾಲಿಸು; ಮುರಿಯಬೇಡ.

# ಸೂಕ್ತಿಪ್ರಭ

ಭೌತಿಕವಾಗಿ ನೀವು ಎಲ್ಲೂ ಇಲ್ಲದಾಗ, ಆಧ್ಯಾತ್ಮಿಕವಾಗಿ ನೀವು ಎಲ್ಲೆಲ್ಲಿಯೂ ಇರುತ್ತೀರಿ.

—*The Cloud of Unknowing*

ಎಚ್ಚರಿಕೆಯಿಂದಿರಿ. ನಿಮ್ಮ ನೆರೆಯವರಿಗೆ ಮನೆ ಕಟ್ಟಿಕೊಡುವ ಭರದಲ್ಲಿ ನಿಮ್ಮ ಮನೆ ನಾಶವಾಗದಂತೆ ನೋಡಿಕೊಳ್ಳಿ.

—ಘಿಲಕಾಲಿಯಾ

ಗಾಢಾಂಧಕಾರದಲ್ಲಿ ನಕ್ಷತ್ರಗಳು ಹೆಚ್ಚು ಪ್ರಕಾಶಮಾನವಾಗಿ ಬೆಳಗುತ್ತವೆ.

—ಹೆಚ್.ಜಾಕ್ಸನ್ ಬ್ರೌನ್

ನಿಮ್ಮ ಮುಖವನ್ನು ಸೂರ್ಯನ ಕಡೆ ತಿರುಗಿಸಿಕೊಂಡಿರಿ. ನಿಮಗೆ ನೆರಳು ಕಾಣಿಸುವುದೇ ಇಲ್ಲ.

—ಹೆಲೆನ್ ಕೆಲರ್

ಕೃತಕೃತ್ಯಾಃ ಪ್ರತೀಕ್ಷಂತೇ ಮೃತ್ಯುಂ ಪ್ರಿಯಮಿವಾತಿಥಿಮ್ ||

ಜೀವನದಲ್ಲಿ ಕೃತಕೃತ್ಯತೆಯನ್ನು ಪಡೆಯದವರು ಮೃತ್ಯುವನ್ನು ಪ್ರಿಯ ಅತಿಥಿಯಂತೆ ನಿರೀಕ್ಷಿಸುತ್ತಾರೆ.

— ಸುಭಾಷಿತ

ಪ್ರೀತಿಸುವ ವ್ಯಕ್ತಿಯು ಪ್ರೀತಿಯ ಜಗತ್ತಿನಲ್ಲಿ ಬಾಳುತ್ತಾನೆ. ದ್ವೇಷಿಸುವ ವ್ಯಕ್ತಿಯು ದ್ವೇಷಪೂರ್ಣ ಜಗತ್ತಿನಲ್ಲಿ ಬಾಳುತ್ತಾನೆ. ನೀವು ಸಂಧಿಸುವ ಪ್ರತಿಯೊಬ್ಬರೂ ನಿಮ್ಮ ಕನ್ನಡಿ.

—ಕೆನ್ ಕೇಯಿಸ್, *Handbook to Higher Consciousness*

ಪರಿಪೂರ್ಣ ವ್ಯಕ್ತಿಯ ಮನಸ್ಸು ಕನ್ನಡಿಯಂತಿರುತ್ತದೆ. ಅದು ಏನನ್ನೂ ಸೆಳೆದುಕೊಳ್ಳುವುದಿಲ್ಲ, ಅದು ಏನನ್ನೂ ತಿರಸ್ಕರಿಸುವುದೂ ಇಲ್ಲ. ಅದು ಸ್ವೀಕರಿಸುತ್ತದೆ, ಇಟ್ಟುಕೊಳ್ಳುವುದಿಲ್ಲ.

—ಚುಯಾಂಗ್ ತ್ಸು